225

ಚಿಕ್ಕಬಳ್ಳಾಪುರ ಸಬ್ ಡಿವಿಜ್ಞ ಆಫಿಸರವರಿಂದ.

ತಾರೀಖು 29ನೇ ಮಾಹೆ ಫಿಬ್ರವರಿ ಸ್ಯ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಬಳ್ಳಾಪುರ ತಾಲ್ಲೂಕು ಪೂರ್ಣಸಾಗರ ಹೋಬಳಿ ಯರ್ರಮಾರೇನಹಳ್ಳಿ ಮಜರೆ ನಾರೇನಹಳ್ಳಿ ಯಂಬ ಜೇ

1ನೇ ಸಾಲಿಗೆ	ಕಂದಾಯ	15—12—0	ಚಿರಾಖ್ ಗ್ರಾಮದಲ್ಲಿ ಬಂಜರಿನಲ್ಲಿ ಇರುವ
2ನೇ ಡಿಟೋ	ಡಿಟೋ	31— 8—0	ಇನಾಂ. ಶಿವಾಯಿ ಎಕ್ ಸರ್ಕಾರಿ ಬಾಬತು
3ನೇ ಡಿಟೋ	ಡಿಟೋ	47— 4—0	ಒಟ್ಟಿಗೆ ಆಕಾರ 155—12—0 ರೂ
4ನೇ ಡಿಟೋ	ಡಿಟೋ	63— 0—0	ಪಾಯಿವುಳ್ಳ ಸಾಗುವಳಿ ಲಾಯಖ್ ವಿಶಿಷ್ಟ
5ನೇ ಡಿಟೋ	ಡಿಟೋ	78—12—0	ಜಮೀರ್ಗಳನ್ನೂ ಬಾಜಾದಲ್ಲಿ ಕೊಣಿಕಿ ಇರುವ
6ನೇ ಡಿಟೋ	ಡಿಟೋ	94— 8—0	ಅಳವೆ. ಕಂದಾಯದ ಮೇಲೆ ಸಾಗುವಳಿಗೆ
7ನೇ ಡಿಟೋ	ಡಿಟೋ	110— 4—0	ಕೊಡಿಸಬೇಕೆಂತಲೂ ಸದರೀ ಜಮೀನಿಗೆ ಆ
8ನೇ ಡಿಟೋ	ಡಿಟೋ	126— 0—0	ಧಾರವಾಗಿರುವ ಕಿಕಸ್ತು ಕಲ್ಲುಭೂವಿ ಮೂರು
9ನೇ ಡಿಟೋ	ಡಿಟೋ	141—12—0	ಕುಂಟೆ ವಂದು ಸಹ ದುರಸ್ತು ಮಾಡಿಕೊಂಡು
10ನೇ ಡಿಟೋ	ಡಿಟೋ	155—12—0	ತರೀ ಬಾಗಾಯತು ಜಮೀರ್ಗಳಿಗೆ ನೀರುಕ

ಟ್ಟಿಕೊಳ್ಳುತ್ತಾ ಖುಷ್ಕೀ ಜಮೀನಿಗೆ ನೀರು ಕಟ್ಟಿಕೊಂಡರೆ ನೀರು ಸರದಿ ಕೊಡುವದಲ್ಲದೆ, ಭೂವಿ, ಕುಂಟೆ ಹಕ್ಕು ಸರಕಾರಕ್ಕೆ ವುಳಸಿಕೊಳ್ಳಬಹುದೆಂತಲೂ ಇದು ಬೇಚಿರಾಖ್ ಗ್ರಾಮ ಆಬಾದಿಗೆ ತರಬೇಕಾದ್ದರಿಂದ ಈ ನಂಬರ್ಗಳಲ್ಲಿ ಇರತಕ್ಕ ವೂಲ್ಕಿ ಸ್ವತ್ತು ಪೈಕಿ ಹತ್ತು ಮನೆಗಳಿಗೆ ತಕ್ಕಷ್ಟು ಮುಫತ್ತು ಬಿಟ್ಟು ಬಾಕಿ ವೂಲ್ತಿ ಸ್ವತ್ತಿಗೆ ಕಿಮ್ಮತ್ತು ಕಟ್ಟಿಸಿ ಕೊಡಬೇಕೆಂತಲೂ ಆದನ್ನ ವಡನೇ ಕೊಡುವದಾಗಿಯೂ ಸದರೀ ಹತ್ತು ಸಾಲ್ ಅಳವೆ ಕಾಲದಲ್ಲಿ ದರ ಸಾಲ್ 10ನೇ ವಂದು ಭಾಗದ ವೇರಿಗೆ ಅಳವೆ ಆಖೈರ್ ವಾಯಿದೆ ವಳಗೆ ಪೂರಾ ಜಮೀರ್ಕಿದ್ದಿಗೆ ತಂದು ಸಾಗುವಳಿ ಮಾಡುವದಾಗಿಯೂ ತಪ್ಪಿದರೆ ಸದರೀ ಜಮೀರ್ಗಳಿಗೆ ಪುರೂ ಸಾಲ್ ಲಾಗಾಯತು ಸರಕಾರಕ್ಕೆ ಭರ ಆಕಾರ ಕೊಡುವದಾಗಿಯೂ ಈ ಷರತ್ತುಗಳ ಮೇಲೆ ಸಾಗುವಳಿಗೆ ಕೊಡಿಸಬೇಕೆಂದು ಗೋರೀಬಿದನೂರು ತಾಲ್ಲೂಕು ಅರಸಾಲ್ ಬಂಡೆ ವೊರಪ್ಪ ಮಾವಿನಕಾಯಿನಹಳ್ಳಿ ನರಸಿಂಗಪ್ಪನ ಮಗ ಕೇಸಪ್ಪ ನೆಂಬುವನು ದರಖಾಸ್ತು ಕೊಟ್ಟು ಇರುತ್ತಾನೆ, ಆದ್ದರಿಂದ ದರಖಾಸ್ತು ಮಾಡಲ್ಪಟ್ಟ ಜಮೀರ್ಗಳನ್ನು ಭರ ಆಕಾರದ ಮೇಲಾಗಲಿ ಅಥವಾ ವೇಲ್ಕಂಡ ದರಖಾಸ್ತು ನಮೂದಿಸುವ ಅಳವೆ ಕಾಲ ಮತ್ತು ಷರತ್ತುಗಳಿಗಿಂತಲೂ ಕಮ್ಮಿ ಆದ ಕಾಲ ವ ಷರತ್ತುಗಳ ಮೇಲಾಗಲಿ ಅಥವಾ ಸರಕಾರಕ್ಕೆ ಲಾಭಕರವಾದ ಇತರ ಷರತ್ತು ವೈಗೈರೆ ಮೇಲಾಗಲಿ ದರಖಾಸ್ತು ಮಾಡಲಬೇಕ್ಷೆ ವುಳ್ಳವರು ಈ ತಾರೀಖು ಲಾಗಾಯತು 3 ತಿಂಗಳ ವಳಗೆ ದರಖಾಸ್ತು ಕೊಡುಬಹುದು. ಆ ಪ್ರಕಾರ ದರಖಾಸ್ತುಗಳು ಬಾರದೆ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ರೂಲ್ಸ್ 20ನೇ ಕಲಂ 18ನೇ ಪ್ಯಾರಾ ಪ್ರಕಾರ ಯುಕ್ತಕಂಡ ರೀತಿ ವೆವಸ್ಥೆ ಮಾಡಲಾಗೀತು.

ಬಿ. ಜಿ. ಕೃಷ್ಣಯ್ಯಂಗಾರ್,
ಸಬ್ ಡಿವಿಜ್ಞ ಆಫಿಸರ್.

ಫಾರೆಸ್ಟ್ ಇಲಾಖಾ.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 16ನೇ ಮಾರ್ಚಿ 1896ನೇ ಇಸವಿ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ;—ಸರ್ಕಾರಿ ತರ್ಫನಿಂದ, ತುಮಕೂರು ಡಿಸ್ಟ್ರಿಕ್ಟ್ ದೇವರಾಯದುರ್ಗ, ಮದ್ದಗಿರಿ, ಕುದುರೆಕಣವೆ, ಹುಲಿಯೂರದುರ್ಗ, ಬುಕ್ಕಾಪಟ್ಟಣದ ಫಾರೆಸ್ಟ್ಗಳಲ್ಲಿ ಜವಾಯಿಸಲ್ಪಟ್ಟ 1895—96ನೇ ಸಾಲ್ ಪಸಾರೆ ಜಿನಸಿಗಳು ವಗೈರೆ ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಹರಾಜು ಮಾಡಲ್ಪಡುತ್ತೆ.

1896ನೇ ಇಸವಿ ಏಪ್ರೆಲ್ 14ರಲ್ಲು ಹುಲಿಯೂರದುರ್ಗದ ತಾಲ್ಲೂಕು ಕಚೇರಿಯಲ್ಲಿ.

ನಂಬರ್.	ಜಿನಸು ತಪಶೀಲ್.	ಪಲ್ಲ.	ಮಣ.	ಶೇರು.	ಷರಾ.
1	ಅಳಲೇಕಾಯಿ	..	229	..	ಸರಾಸರಿ
2	ಹೊಂಗೇಬೀಜ	1	..	..	ಡಿಟೋ
3	ಸೀಗೇಕಾಯಿ	..	20	..	ಡಿಟೋ
4	ಹುಣಸೇಹಣ್ಣು	..	10	..	ಡಿಟೋ